ಶ್ರೀ ಇ. ನಾರಾಯಣ ಗೌಡ.—ಈಗ ಸಣ್ಣ ವರ್ತಕರು ಲೈಸೆನ್ಸ್ ಪಡೆದಿರುವವರಿಂದ ಒಂದಕ್ಕೆ ಎರಡರಷ್ಟು ಬೆಲೆ ಕೊಟ್ಟು ತೂಕ ಮತ್ತು ಅಳತೆಯ ಸಾಧನಗಳನ್ನು ಪಡೆಯಬೇಕಾಗಿರುವುದರಿಂದ ಅವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

†Sri KONDAJJI BASAPPA.—That is not correct. In fact, prior to the introduction of the Mysore Weights and Measures (Enforcement) Act, 1958, the old Weights and Measures were in force and they were being supplied by Government. Then, Government was in a position to supply them. After introduction of the Metric System, we have licensed these manufacturers, dealers and repairers. There are a good number of these people. The rates are competetive and they are cheap as compared to the old rates.

ಶ್ರೀ ಇ. ನಾರಾಯಣ ಗೌಡ.—ಲೈಸೆನ್ಸ್‌ದಾರರಿಂದ ವರ್ತಕರಿಗೆ ಕಿರುಕುಳ ಆಗುತ್ತಿಲ್ಲವೆಂಬುದನ್ನು ತಿಳಿದುಕೊಳ್ಳಲು ತಮ್ಮಲ್ಲಿರುವ ಆಡಳಿತ ಯಂತ್ರ ಯಾವುದು ?

Sri KONDAJJI BASAPPA.—We have got Inspectors. They will be going and checking them every now and then. The rates are competitive and they are given in the answer.

ಶ್ರೀ ಇ. ನಾರಾಯಣ ಗೌಡ.—ಪ್ರತಿ ವರ್ಷ ಈ ಸಾಧನಗಳ ದರವನ್ನು ಹೆಚ್ಚಿಸುವುದು ನ್ಯಾಯವೆ ?

Sri KONDAJJI BASAPPA.—In fact, we have no control over the fixation of the rates. We have to license them for manufacturing the weights and measures. These dealers will have to take out licence. Anybody can buy wherever he gets it cheaper.

ಶ್ರೀ ಇ. ನಾರಾಯಣ ಗೌಡ.—ದರ ನಿಗದಿ ಮಾಡದಿರುವುದರಿಂದ ಅನಾಹುತವಾಗುತ್ತಿದೆ. ಆದುದರಿಂದ ಇನ್ನು ಮುಂದಾದರೂ ನೂಕ್ತಕ್ರಮ ಕೈಕೊಂಡು ಅದನ್ನು ತಪ್ಪಿಸುತ್ತೀರಾ ?

Sri KONDAJJI BASAPPA.—So far, no such specific instance has been brought to the notice of the Government. If any such instances are brought to our notice, we will examine the same.

Extent of land that comes under Package Programme in Mandya District during the first year of the Scheme.

*Q.—423. Sri G. MADE GOWDA (Malavalli).—

Will the Government be pleased to state :—

(*a*) the number of acres of land in Mandya District that come under Package Programme during the first year of the Scheme.

(*b*) the number of simple farm production plans prepared and the number of families that come under the first year Package Programme and the amount spent in the year ;

(*c*) the average increase of production of each family due to the implementation of the Package Programme ?

A.—Sri H. C. BORIAH (Parliamentary Secretary to the Minister for Agriculture).—

(*a*) 66.238 Acres.

(*b*) (i) Simple Farm Plans...10,845

(ii) Families covered during 1962-63...10,845

(iii) Rs. 28,90,255 short term loan was disbursed by the Service Co-operative Societies of which a sum of Rs. 9,35,596 represents funds disbursed without plans.

(*c*) The data for the current year is being processed.

ಶ್ರೀ ಜಿ. ಮಾದೇಗೌಡ.—ಪ್ಯಾಕೇಜ್ ಸ್ಕೀಮ್ ಜಾರಿಯಲ್ಲಿರುವ ಪ್ರದೇಶದಲ್ಲಿ ರೈತರಿಗೆ ಸಿಕ್ಕುತ್ತಿರುವ ಸೌಲಭ್ಯವೇನು ?

†ಶ್ರೀ ಎಚ್. ಸಿ. ಬೋರಯ್ಯ.—ರಾಸಾಯನಿಕ ಗೊಬ್ಬರ, ಧನ ಸಹಾಯ, ಸುಧಾರಿತ ಇಂಪ್ಲಿಮೆಂಟ್ಸ್ ಮುಂತಾದುವನ್ನು ನರಬರಾಯಿ ಮಾಡಲಾಗುತ್ತಿದೆ ; ಉತ್ತಮ ಮಾರ್ಗದರ್ಶನ ನೀಡರಾಗುತ್ತಿದೆ, ಹೇಗೆ ಮುಂದುವರಿಯಬೇಕೆಂದು ಮಾರ್ಗದರ್ಶನ ಮಾಡಿ ಪ್ರಯೋಗ ಮಾಡಿ ತೋರಿಸಲಾಗುತ್ತಿದೆ.

ಶ್ರೀ ಜಿ. ಮಾದೇಗೌಡ:—1962-63ರಲ್ಲಿ ಅದರ ಹಿಂದಿನ ವರ್ಷಕ್ಕಿಂತ ಉತ್ಪತ್ತಿ ಎಷ್ಟು ಹೆಚ್ಚಾಗಿದೆ ? ಬೆಳೆ ಎಷ್ಟು ಹೆಚ್ಚಾಗಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಪ್ರತಿ ಎಕರೆಯಲ್ಲೂ ಒಂದೂವರೆ ಚೀಲದಿಂದ ಐದು ಚೀಲಗಳವರೆಗೆ ಹೆಚ್ಚು ಉತ್ಪತ್ತಿ ಬಂದಿದೆ.

ಶ್ರೀ ಜಿ. ಮಾದೇಗೌಡ.—'ಸಾಮಾನ್ಯ ವ್ಯವಸಾಯೋತ್ಪನ್ನ ಯೋಜನೆ' ಎಂದರೇನು ?

ಶ್ರೀ ಎಚ್. ಸಿ. ಬೋರಯ್ಯ.—ಬೇಕಾದರೆ ಅದರ ಪ್ರತಿಯೊಂದನ್ನು ಟೇಬಲ್ ಮೇಲೆ ಇಡುತ್ತೇನೆ.

ಶ್ರೀ ಜೆ. ದೇವಯ್ಯ. - ಯಾವ ವರ್ಷದಿಂದ ಈ ಯೋಜನೆ ಜಾರಿಗೆ ಬಂದಿದೆ ?

ಶ್ರೀ ಎಚ್. ಸಿ. ಬೋರಯ್ಯ.—1962ನೆಯ ಇಸವಿ ಜನವರಿ 4ನೆಯ ತಾರೀಖಿನಿಂದ.

ಶ್ರೀ ಜೆ. ದೇವಯ್ಯ—66,238 ಎಕರೆಗಳಲ್ಲಿ ಆಬಾದು ಮಾಡಿರುವ ತರಿ ಮತ್ತು ಖುಷ್ಕಿ ಜಮೀನೆಷ್ಟು ?

ಶ್ರೀ ಎಚ್. ಸಿ. ಬೋರಯ್ಯ.—38,105 ಎಕರೆಯನ್ನು ಬತ್ತದ ಸಾಗುವಳಿಗೆ ತರಬೇಕೆಂದಿದ್ದೆವು. ಅದರಲ್ಲಿ 31,639 ಎಕರೆಗಳಲ್ಲಿ ಮಾತ್ರ ತರಿ ವ್ಯವಸಾಯಕ್ಕೆ ಬಂದಿದೆ. 50 ಸಾವಿರ ಎಕರೆ ಖುಷ್ಕಿ ಸಾಗುವಳಿಗೆ ತರಬೇಕೆಂದಿದ್ದುದರಲ್ಲಿ 34,509 ಎಕರೆಗಳನ್ನು ಮಾತ್ರ ತರಲು ಅವಕಾಶವಾಗಿದೆ.

ಶ್ರೀ ಎಸ್. ನಂಜೇಗೌಡ.—ಸಾಮಾನ್ಯ ವ್ಯವಸಾಯೋತ್ಪನ್ನ ಯೋಜನೆಗಾಗಿ ಎಷ್ಟು ಖರ್ಚಾಗಿದೆ ? ಅದರ ಪ್ರಕಾರ ಹಣ ಒದಗಿಸುತ್ತಿದ್ದೀರಾ ?

(ಉತ್ತರವಿಲ್ಲ).

Sri N. O. SAMAJI.—(In Marathi).

ಶ್ರೀ ಜೆ. ದೇವಯ್ಯ.—ಈ ಯೋಜನೆ ಜಾರಿಗೆ ಬಂದಮೇಲೆ ಬುಲ್‌ಡೋಜರಿಂದ ಎಷ್ಟು ಎಕರೆ ಮಟ್ಟಮಾಡಿ ಹದಗೊಳಿಸಲಾಗಿದೆ ? ಟ್ರ್ಯಾಕ್ಟರಿಂದ ಎಷ್ಟು ಎಕರೆ ಉಳುಮೆ ಮಾಡಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಬಹುಶಃ ಬೇರೆ ಪ್ರಶ್ನೆ ಹಾಕಿದರೆ ಅದಕ್ಕೆ ಸರಿಯಾದ ಉತ್ತರ ಕೊಡಬಹುದು.

ಶ್ರೀ ಎನ್. ನಂಜೇಗೌಡ.—ಪ್ಲಾನ್ ಪ್ರಕಾರ ಹಣ ಒದಗಿಸಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಉತ್ತರದಲ್ಲಿ ತಿಳಿಸಿರುವಂತೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸಿದ್ದೇವೆ.

ಶ್ರೀ ಜಿ. ವಿ. ಗೌಡ.—ಈ ಯೋಜನೆಯನ್ನು ಜಾರಿಗೆ ತಂದ ಮೇಲೆ ಪ್ರತಿವರ್ಷ ಎಷ್ಟು ಉತ್ಪತ್ತಿ ಹೆಚ್ಚಾಗಿದೆಯೆಂಬುದನ್ನು ತಿಳಿಸಲು ಸಾಧ್ಯವೆ ?

ಶ್ರೀ ಎಚ್. ಸಿ. ಬೋರಯ್ಯ.—ವಿಶದವಾಗಿ ವಿವರ ಬೇಕಾದರೆ ಒದಗಿಸಲಾಗುತ್ತದೆ.

ಶ್ರೀ ಎಕ್. ಓ. ಸಾಮಾಜಿ.—(ಮರಾಠಿ ಭಾಷೆ ಅನುವಾದ)—ಈಗ ಎಕರೆಗೆ ಒಂದೂವರೆ ಚೀಲದಿಂದ 5 ಚೀಲಗಳವರೆಗೆ ಜನಸ್ತಿಯಾಗಿದೆ ಎಂದು ಹೇಳಿದರು ; ಈ ಹಿಂದೆ ಎಕರೆಗೆಷ್ಟು ಉತ್ಪತ್ತಿಯಿತ್ತು ಎಂಬುದೆ ಗೊತ್ತಿಲ್ಲದಿರುವಾಗ ಈಗ ಹೆಚ್ಚಿಗೆ ಆಯಿತು ಎಂದು ಹೇಗೆ ಹೇಳುತ್ತಾರೆ ?

ಶ್ರೀ ಜಿ. ನಾರಾಯಣ ಗೌಡ.—ಈ ಪ್ಯಾಕೇಜ್‌ದೀಲ್ ಜಾರಿಗೆ ಬಂದ ಮೇಲೆ ಎಕರೆ ಒಂದಕ್ಕೆ ಒಂದೂವರೆ ಪಲ್ಲದಿಂದ, ಐದು ಪಲ್ಲದವರೆಗೆ ಇಳುವರಿ ಹೆಚ್ಚಾಗಿರುತ್ತದೆಂದು ತಿಳಿದು ಬಂದಿದೆ.

ಶ್ರೀ ಜಿ. ಮಾದೇಗೌಡ.—ಇಲ್ಲಿ ಸೂಚಿಸಿರತಕ್ಕ 935596 ರೂಪಾಯಿಗಳು ಏನಿದೆ ಈ ಹಣ ಅನೇಕರಿಗೆ ಸಿಕ್ಕಿಲ್ಲ. ಕಾಲಕ್ಕೆ ಸರಿಯಾಗಿ ಈ ಹಣ ಹಂಚಿಸಲು ಸರ್ಕಾರದವರಿಗೆ ಇರತಕ್ಕ ಅಡಚಣೆ ಯೇನು ?

ಶ್ರೀ ಜಿ. ನಾರಾಯಣ ಗೌಡ.—ನಾವು ಸಿಂಪಲ್ ಫಾರಂ ಪ್ರೊಡಕ್ಷನ್ ಪ್ಲಾನ್ ಮಾಡುವುದಕ್ಕೆ ಮುಂಚೆ ಸೊಸೈಟಿಗಳ ಮೂಲಕ ಹಣವನ್ನು ರೈತರಿಗೆ ಹಂಚಿಕೆ ಮಾಡಲಾಗುತ್ತಿತ್ತು. ಆ ಹಣ ಬೇರೆ. ಈಗ ಈ ಸ್ಕೀಂ ತಯಾರಾದಮೇಲೆ ಪುನಃ ಹಂಚಿರತಕ್ಕ ಹಣ 9,35,596 ರೂಪಾಯಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿಂದಿನ ಸಾಲಿನ ದತ್ತಾಂಶ ಇವರಲ್ಲಿ ಇಲ್ಲದಿರುವಾಗ ಪ್ರಸಕ್ತ ಸಾಲಿನ ದತ್ತಾಂಶ ಸಂಗ್ರಹಿಸಿ ಇಷ್ಟೇ ಉತ್ಪತ್ತಿ ಜಾಸ್ತಿಯಾಯಿತು ಎಂದು ಹೇಗೆ ಹೇಳುತ್ತಾರೆ ?

ಶ್ರೀ ಜಿ. ನಾರಾಯಣ ಗೌಡ.—ಈ ಸ್ಕೀಂ ಜಾರಿಗೆ ಬಂದಿರುವುದೇ 1962ರಲ್ಲಿ.

ಶ್ರೀ ಎಸ್. ಎಂ. ಕೃಷ್ಣ.—ಇಂಥ ವ್ಯವಸಾಯ ಪದ್ಧತಿಗಳನ್ನು ಜಾರಿಗೆ ತರುತ್ತಿರುವುದು ಸಣ್ಣ ಪುಟ್ಟ ಅಧಿಕಾರಿಗಳನ್ನು ಸೃಷ್ಟಿ ಮಾಡುವುದಕ್ಕಾಗಿ ಎಂದು ಅಲ್ಲಿಯ ಜನರು ಅಡಿಕೊಳ್ಳುವ ಮಾತು ಸರ್ಕಾರದವರ ಕಿವಿಗೆ ಬಿದ್ದಿದೆಯೇ ?

ಶ್ರೀ ಜಿ. ನಾರಾಯಣ ಗೌಡ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಒಂದು ವರ್ಷದಲ್ಲಿ ಒಟ್ಟು ಹೆಚ್ಚಾದ ಪೊತ್ತವೆಷ್ಟು ?

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಸಂಗ್ರಹಿಸುತ್ತಿದ್ದೇವೆ.

Sri D. PARAMESWARAPPA.—What is the extent of land still to be covered by this programme ?

Sri G. NARAYANA GOWDA.—The whole of Mandya District has 5,55,000 acres ; out of this 20 per cent is covered.

Sri H. R. KESHAVAMURTHY.—Supplementary to (*c*) : What is the time Government will take to furnish the processed data ?

Sri G. NARAYANA GOWDA.—I cannot say now.

ಶ್ರೀ ಎನ್. ಓ. ಸಾಮಾಜಿ.—(ಮರಾಠಿ ಭಾಷೆ ಅನುವಾದ) ಈ ಪ್ಯಾಕೇಜ್ ಸ್ಕೀಂಗೆ ಎಷ್ಟು ಬೀಜ ಮತ್ತು ಗೊಬ್ಬರ ಹಂಚಲಾಯಿತು ಎಂದು ಕೇಳುತ್ತಾರೆ ?

ಶ್ರೀ ಜಿ. ನಾರಾಯಣ ಗೌಡ.—1962-63ನೇ ಸಾಲಿಗೆ 27,372 ಟನ್ ಗೊಬ್ಬರ ಹಂಚಲಾಗಿದೆ.

ಶ್ರೀ ಜಿ. ಮಾದೇಗೌಡ.—ಈ ಪ್ಯಾಕೇಜ್ ಸ್ಕೀಂಗೆ ಸೇರಿರತಕ್ಕ 10845 ಸಂಸಾರಗಳಿಗೆ ಸಕಾಲಕ್ಕೆ ಬುಲ್‌ಡೋಜರ್ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಲಿಲ್ಲ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ನಾರಾಯಣ ಗೌಡ.—ಈ ಸೌಲಭ್ಯಗಳನ್ನು ಕೇಳಿದರೆ ಕೊಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇಲ್ಲಿ ಹೇಳಿರತಕ್ಕ ಮೊಬಲಗು ಹಣದ ರೂಪದಲ್ಲಿ ಕೊಡಲಾಯಿತೋ ಅಥವಾ ಗೊಬ್ಬರ ಬೀಜ ಇತ್ಯಾದಿಗಳ ರೂಪದಲ್ಲಿ ಕೊಡಲಾಯಿತೊ ?

ಶ್ರೀ ಜಿ. ನಾರಾಯಣ ಗೌಡ.—100ಕ್ಕೆ 60 ರಷ್ಟನ್ನು ಬೀಜ ಗೊಬ್ಬರಗಳ ರೂಪದಲ್ಲಿ ಕೊಡಲಾಗುವುದು. ಕಳೆ ಕೀಳುವುದು ಒಕ್ಕಣೆ ಮುಂತಾದ ಕೆಲಸಗಳಿಗೆ 100ಕ್ಕೆ 40 ರಷ್ಟನ್ನು ಹಣದ ರೂಪದಲ್ಲಿ ಕೊಡಲಾಗುವುದು.

ಶ್ರೀ ಎಸ್. ಶಿವಪ್ಪ.—ಎರಡು ವರ್ಷಗಳಲ್ಲಿ 66,238 ಎಕರೆ ಜಮೀನು ಮಾಡಿದ್ದಾರೆ. ಈ ಸ್ಕೀಮು ಪೂರ್ತಿಯಾಗಿ ಜಾರಿಗೆ ಬರಲು ಅಂದಾಜು ಎಷ್ಟು ಕಾಲ ಬೇಕೆಂಬುದನ್ನು ಗೊತ್ತುಮಾಡಿದ್ದಾರೆಯೇ ?

ಶ್ರೀ ಜಿ. ನಾರಾಯಣ ಗೌಡ.—ಇದು ಐದು ವರ್ಷದ ಸ್ಕೀಂ.

ಶ್ರೀ ವಿ. ಎಂ. ದೇವ್.—ಈ ಸ್ಕೀಂನಲ್ಲಿ ಎಷ್ಟು ಸಂಸಾರಗಳಿಗೆ ಇಂಪ್ರೂವ್ಡ್ ಇಂಪ್ಲಿಮೆಂಟ್ಸ್ ಅನ್ನು ಹಂಚಿದ್ದೀರಿ ?

ಶ್ರೀ ಜಿ. ನಾರಾಯಣ ಗೌಡ.—ಆ ವಿವರ ಈಗ ನನ್ನಲ್ಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ಯೋಜನೆಗಾಗಿ ನೇಮಿಸಿಕೊಂಡಿರತಕ್ಕ ಅಧಿಕಾರಿಗಳ ಸಂಖ್ಯೆ ಎಷ್ಟು ಮತ್ತು ಸಿಬ್ಬಂದಿಯ ಖರ್ಚೆಷ್ಟು ?

ಶ್ರೀ ಜಿ. ನಾರಾಯಣ ಗೌಡ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಲಾಗುತ್ತದೆ.